1	2		3	4
೮೮	೧೮.	ಕೆ.ಬಿ.ಎಸ್. ಕೆಂಗಲಗುತ್ತಿ	೦೨	
೮೯	೧೯.	ಕೆ.ಬಿ.ಎಸ್. ಹಣಮಸಾಗರ	೦೨	
೯೦	೨೦.	ಕೆ.ಬಿ.ಎಸ್. ಸಿರಬೂರ	೦೨	
೯೧	೨೧.	ಕೆ.ಬಿ.ಎಸ್. ಬಬಲಾದ	೦೨	
೯೨	೨೨.	ಕೆ.ಬಿ.ಎಸ್. ಜಂಬಗಿ	೦೨	
೯೩	೨೩.	ಕೆ.ಬಿ.ಎಸ್. ಕಲಾರಹಟ್ಟಿ	೦೨	
೯೪	೨೪.	ಕೆ.ಬಿ.ಎಸ್. ನಂದ್ಯಾಳತೊಟ	೦೨	
೯೫	೨೫.	ಕೆ.ಬಿ.ಎಸ್. ಕೊಡಬಾಗಿ	೦೨	
೯೬	೨೬.	ಯು.ಬಿ.ಎಸ್. ಮಮದಾಪುರ	೦೨	
	ಒಟ್ಟು		೬೩	

ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿ ಆರೋಗ್ಯ ಇಲಾಖೆಯಲ್ಲಿನ ವಿವಿಧ ದರ್ಜೆಯ ಹುದ್ದೆಗಳ ಭರ್ತಿ

2517(3379) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ (ಬಸವನ ಬಾಗೇವಾಡಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳು ಯಾವುವು; (ವೈದ್ಯ ಮತ್ತು ವೈದ್ಯೇತರವಾಗಿ ಪ್ರತ್ಯೇಕ ವಿವರ ನೀಡುವುದು)

ಆ. ಸದರಿ ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ವಿಜಾಪುರ ತಾಲ್ಲೂಕು ಕುಂಬಾಗಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಮಂಜೂರಾತಿ ನೀಡಿದೆಯೇ? ನೀಡಿದ್ದಲ್ಲಿ ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ)

	ಮಂಜೂರು	ಕಾರ್ಯನಿರತ	ಖಾಲಿ
ವೈದ್ಯರು	16	12	4
ವೈದ್ಯೇತರ	195	137	58
ಒಟ್ಟು	211	149	62

ಆ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಹಾಗೂ 550 ವೈದ್ಯರ ನೇರ ನೇಮಕಾತಿ ಕಾರ್ಯ ಪ್ರಗತಿಯಲ್ಲಿದೆ. ಕೆಲವು ವೈದ್ಯೇತರ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ವಿಶೇಷ ನೇಮಕಾತಿ ನಿಯಮಾವಳಿ ರಚನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು. ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು ಹುದ್ದೆಗಳ ಮಂಜೂರಾತಿ ಆದ ನಂತರ ಪ್ರಾರಂಭ ಮಾಡಲಾಗುವುದು.

ನಾಗಮಂಗಲ ತಾಲ್ಲೂಕಿನಲ್ಲಿ ಪ್ರೌಢಶಾಲಾ ಕಟ್ಟಡದ ಕಾಮಗಾರಿ

2518(3133) ಶ್ರೀ ಚೆಲುವರಾಯ ಸ್ವಾಮಿ ಎನ್. (ನಾಗಮಂಗಲ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ನಾಗಮಂಗಲ ತಾಲ್ಲೂಕಿನಲ್ಲಿ ಹಲವು ಪ್ರೌಢಶಾಲಾ ಕಟ್ಟಡ ಕಾಮಗಾರಿಗಳು ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಬಂದಿದ್ದರೆ ಇದನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1. ಒಂದು ಸರ್ಕಾರಿ ಪ್ರೌಢಶಾಲೆ ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

2. ಸದರಿ ಸರ್ಕಾರಿ ಪ್ರೌಢಶಾಲೆ ತಟ್ಟಹಳ್ಳಿ ಇದರ ಕಟ್ಟಡವು ನಿರ್ಮಾಣವಾಗುತ್ತಿದ್ದು ಛಾವಣಿ ಹಂತದಲ್ಲಿದೆ. ಈ ಕಟ್ಟಡ ನಿರ್ಮಾಣಕ್ಕೆ 16.80 ಲಕ್ಷಗಳು ಅಂದಾಜು ಪಟ್ಟಿಗೆ 98-99 ರಲ್ಲಿ ಅನುಮೋದನೆ ದೊರೆತ್ತಿದ್ದು ಈವರೆಗೂ ರೂ.10.59 ಲಕ್ಷಗಳನ್ನು ಜಿಲ್ಲಾಮಲಯ ಕಾರ್ಯಕ್ರಮದಲ್ಲಿ ಮಂಜೂರು ಮಾಡಿದೆ ಹಾಗೂ ಪ್ರಸಕ್ತ ಸಾಲಿನಲ್ಲಿ ರೂ. 5.91 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದ್ದು ಕಟ್ಟಡ ಕಾಮಗಾರಿ ಪೂರ್ಣಗೊಳಿಸಲಾಗುವುದು.